<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.697/2021. PW-2.**

ದಿನಾಂಕಃ**28.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ಪ್ರತಿವಾದಿಯರ ಪರ ಶ್ರೀ ಕೆ ಎಂ ಜೆ ವಕೀಲರಿಂದಃ-

ವಾದಿ ಮತ್ತು 1 ನೇ ಪ್ರತಿವಾದಿ ಗೊತ್ತು. ನನ್ನದು ಚಿಕ್ಕಬಳ್ಳೆಕೆರೆ ಗ್ರಾಮ, 1 ನೇ ಪ್ರತಿವಾದಿಯ ಊರು ಹನುಮನಹಳ್ಳಿ. ವಾದಿಯ ಊರು ಸಹಃ ಚಿಕ್ಕಬಳ್ಳೆಕೆರೆ. ನನ್ನ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತಾದ ಸರ್ವೆ ನಂ.17/1 ರಲ್ಲಿ 3 ಎಕರೆ 25 ಗುಂಟೆ ಇದೆ, ಅದರ ಹಳೆಯ ಸರ್ವೆ ನಂಬರ್ 17 ಆಗಿತ್ತು, ಈಗ 17/1 ಆಗಿದೆ. ಸರ್ವೆ ನಂ.ಹೊಸದಾಗಿ 17/1 ಎಂದು ಯಾವ ದಿನಾಂಕ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 17/1 ರ ಸ್ವತ್ತು ಮೂಲತಃ ನನಗೆ ಗೊತ್ತಿರುವಾಗಿನಿಂದಲೂ ವಾದಿಯ ಹೆಸರಿನಲ್ಲಿ ಇತ್ತು. ಸದರಿ ಸ್ವತ್ತನ್ನು ವಾದಿಯ ಅಜ್ಜನಾದ ಶಿವಲಿಂಗಪ್ಪ ರವರು ಖರೀದಿಸಿರುತ್ತಾರೆ. ಅವರು ಯಾವಾಗ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಿವಲಿಂಗಪ್ಪ ರವರು ಖರೀದಿಸಿದ ವಿಚಾರವನ್ನು ವಾದಿಯೇ ನನಗೆ ಹೇಳಿರುತ್ತಾರೆ. ವಾದಿಯ ತಂದೆಯ ಹೆಸರು ಬಸಪ್ಪ, ಬಸಪ್ಪನ ತಂದೆಯ ಹೆಸರು ಶಿವಲಿಂಗಪ್ಪ. ಶಿವಲಿಂಗಪ್ಪ ರವರು 3 ಎಕರೆ 25 ಗುಂಟೆಯನ್ನು ಪುಟ್ಟಯ್ಯ ರವರಿಂದ ಖರೀದಿಸಿದರು. ವಾದಿಯು ನನ್ನ ಊರಿನವರು ಮತ್ತು ಅಕ್ಕಪಕ್ಕದ ಜಮೀನಿನವರು. ಅವರು ನನಗೆ ಸಂಬಂಧಿಕರಲ್ಲ.

ನಾನು ಈ ದಿನ ಸಾಕ್ಷ್ಯ ನುಡಿಯಲು ನನ್ನನ್ನು ನ್ಯಾಯಾಲಯಕ್ಕೆ ವಾದಿಯು ಕರೆದುಕೊಂಡು ಬಂದಿರುತ್ತಾರೆ. ನನ್ನ ಜಮೀನಿನ ಸರ್ವೆ ನಂ.17/1 ರಲ್ಲಿ 3 ಎಕರೆ 25 ಗುಂಟೆ ಇರುತ್ತದೆ. ನನ್ನ ಜಮೀನು ನನಗೆ ಮೂಲತಃ ನನ್ನ ಅಜ್ಜನವರಾದ ಕೆಂಚಜ್ಜ ರವರು ಖರೀದಿಸಿದ್ದರಿಂದ ಬಂದಿರುತ್ತದೆ. ನನ್ನ ಅಜ್ಜ ಯಾವಾಗ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ವಾದಿಯ ಗಂಡನ ಹೆಸರು ವೀರಭದ್ರಪ್ಪ.

ಶಿವಲಿಂಗಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಬಸಪ್ಪ ನಿಗೆ ಒಬ್ಬಳೇ ಮಗಳು. ವಾದಿಯ ಅಪ್ಪನ ಹೆಸರು ಗಂಗಪ್ಪ ಎಂದರೆ ಸರಿಯಲ್ಲ ಬಸಪ್ಪ ಎಂಬುದಾಗಿರುತ್ತದೆ. ಗಂಗಪ್ಪ ಮತ್ತು ಗಂಗಮ್ಮ ರವರ ಮಗಳೇ ವಾದಿಯಾಗಿರುತ್ತಾರೆ ಎಂದರೆ ಅವರ ತಂದೆಯ ಹೆಸರು ಗಂಗಪ್ಪ ಎಂದಾಗಿರುವುದಿಲ್ಲ. ಸದರಿ ಗಂಗಪ್ಪ ರವರನ್ನು

ಗಂಗಜ್ಜ ಎಂದೂ ಸಹಃ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಿ

ಗಂಗಜ್ಜ ಯಾನೆ ಗಂಗಪ್ಪ ರವರಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಗಂಗಪ್ಪ ರವರ ಮೊದಲನೇ ಮಗಳನ್ನು ಬಂಟಿಗನಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗಂಗಪ್ಪ ನ ವಿಚಾರಗಳು ಗೊತ್ತಿಲ್ಲ. ವಾದಿಗೆ ಒಟ್ಟು 6 ಜನ ಮಕ್ಕಳು ಅವರುಗಳೆಂದರೆ - ಈರಪ್ಪ, ಗಿರಿಜಮ್ಮ, ಚನ್ನಬಸಮ್ಮ, ತಿಪ್ಪೇಸ್ವಾಮಿ, ವಿರೂಪಾಕ್ಷಪ್ಪ, ಲಿಂಗರಾಜು ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ಶಿವರುದ್ರಪ್ಪ ರವರ ಜಮೀನು, ಉತ್ತರಕ್ಕೆ ಪುಟ್ಟಯ್ಯ ರವರ ಜಮೀನು, ದಕ್ಷಿಣಕ್ಕೆ ಯಾರದ್ದು ಎಂದು ಮರೆತುಹೋಗಿದೆ.

ನನ್ನ ಜಮೀನಿನ ಖಾತೆಯು ಈಗ ನನ್ನ ಅಜ್ಜನ ಮೂರು ಜನ ಮಕ್ಕಳ ಹೆಸರಿನಲ್ಲಿ ಇದೆ. ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಅಥವಾ ವಾದಿಯ ವಂಶಸ್ಥರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿ. ಆದರೆ ಕ್ರಯ ಆಗಿರುತ್ತದೆ.

ನಾನು ಈ ಹಿಂದೆ ನಾನು ಕಡೂರು ನ್ಯಾಯಾಲಯದಲ್ಲಿಯೇ ಓ ಎಸ್ 694/2021 ರಲ್ಲಿ ಚಂದ್ರಪ್ಪ ರವರು ಹಾಕಿದ ದಾವೆಯಲ್ಲಿ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆಯು ಈಗಲೂ ಸಹಃ ಪುಟ್ಟಯ್ಯ ರವರ ಹೆಸರಿನಲ್ಲಿ ಆ ನಂತರದಲ್ಲಿ ಅವರ ಮಕ್ಕಳಾದ ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಓಡುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ಸಹಃ ಪ್ರತಿವಾದಿಗಳೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ಸ್ವಾಧೀನದಲ್ಲಿ ಇದ್ದಾರೆ.

ನಿಪಿ 10 ನನ್ನ ಕುಟುಂಬದ ವಂಶವೃಕ್ಷವಾಗಿರುತ್ತದೆ. ನನ್ನ ತಾತಾನ ಹೆಸರು ಕೆಂಚಪ್ಪ, ಅವರ ಪತ್ನಿಯ ಹೆಸರು ಲಕ್ಕಮ್ಮ. ಕೆಂಚಪ್ಪ-ಲಕ್ಕಮ್ಮ ರವರಿಗೆ 3 ಜನ ಗಂಡು ಮಕ್ಕಳು, 2 ಹೆಣ್ಣುಮಕ್ಕಳು - ಅವರುಗಳೆಂದರೆ ತೊಳಚಮ್ಮ ಮತ್ತು ಲಕ್ಷ್ಮಮ್ಮ. ತೊಳಚಮ್ಮ ಮತ್ತು ಲಕ್ಷ್ಮಮ್ಮ ರವರನ್ನು ನಿಪಿ10 ರಲ್ಲಿ ಕಾಣಿಸಿಲ್ಲ ಎಂದರೆ ಅವರು ಮೃತಪಟ್ಟಿದ್ದಾರೆ. ಕೆಂಚಪ್ಪ-ಲಕ್ಕಮ್ಮ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರು ಮೃತಪಟ್ಟಿದ್ದಾರೆ ಎಂದು ನಿಪಿ 10 ರಲ್ಲಿ ಹೇಳಿರುತ್ತೇನೆ.

ನನ್ನ ತಾತಾ ಕೆಂಚಪ್ಪ ಮತ್ತು ಶಿವಲಿಂಗಪ್ಪ ಯಾನೆ ಶಿವಲಿಂಗಣ್ಣ ರವರಿಗೆ

ಯಾವುದೇ ಸಂಬಂಧ ಇರುವುದಿಲ್ಲ. ನಿಪಿ 10ನ್ನು ನಾನೇ ವಕೀಲರ ಬಳಿ ಹೇಳಿ ಬರೆಸಿರುತ್ತೇನೆ. ನಿಪಿ 10 ರಲ್ಲಿ ನನ್ನ ಸಹಿ ಇದೆ. ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ.

ಸಿದ್ದರಾಮಣ್ಣ ನನ್ನ ಸ್ವಂತ ಅಣ್ಣ. ನನ್ನ ತಂದೆ-ತಾಯಿಗೆ ಒಟ್ಟು 4 ಜನ ಗಂಡು ಮತ್ತು ಒಬ್ಬಳು ಹೆಣ್ಣು ಮಕ್ಕಳು, ನನ್ನ ಸಹೋದರಿಯ ಹೆಸರನ್ನು ನಿಪಿ10 ರಲ್ಲಿ ಕಾಣಿಸಿಲ್ಲ ಎಂದರೆ ಅವರು ಸಹಃ ಮೃತಪಟ್ಟಿದ್ದಾರೆ.

ಕೆಂಚಪ್ಪ ರವರ ಹಿರಿಯ ಮಗನಾದ ರಾಮಪ್ಪ ರವರಿಗೆ 3 ಜನ ಗಂಡು ಮಕ್ಕಳು, ಅವರುಗಳೆಂದರೆ ಚಂದ್ರಪ್ಪ, ಶಿವಮೂರ್ತಪ್ಪ, ತಿಪ್ಪೇಶಪ್ಪ ಹಾಗೂ 3 ಜನ ಹೆಣ್ಣು ಮಕ್ಕಳು. ಚಂದ್ರಪ್ಪ ರವರು ಮೃತಪಟ್ಟಿದ್ದಾರೆ.

ನಿಂಗಪ್ಪ ರವರಿಗೆ 2 ಜನ ಗಂಡು ಮತ್ತು 6 ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಆನಂದಪ್ಪ ಮತ್ತು ನಿಜಗುಣ. ನಿಪಿ 10 ರಲ್ಲಿ ಕೇವಲ ಗಂಡು ಮಕ್ಕಳನ್ನು ಮಾತ್ರ ಕಾಣಿಸಿದ್ದು, ಹೆಣ್ಣು ಮಕ್ಕಳನ್ನು ಕಾಣಿಸಿಲ್ಲ ಎಂದರೆ ಸರಿ.

ನಮ್ಮ ಕುಟುಂಬದಲ್ಲಿ ಕೆಂಚಪ್ಪರವರ ಮೂರು ಜನ ಮಕ್ಕಳಿಗೆ ಆಸ್ತಿಯು ವಿಭಾಗದಲ್ಲಿ ಬಂದಿರುತ್ತದೆ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಃ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆಯ ಹೆಸರು ಗಂಗಜ್ಜ ಎಂದು ಗೊತ್ತಿದ್ದರು ಸಹಃ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸುಳ್ಳು ವಂಶವೃಕ್ಷವನ್ನು ಸೃಷ್ಟಿಸಿಕೊಂಡು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಕುಟುಂಬಕ್ಕೂ ಮತ್ತು ಕ್ರಯಪತ್ರ ಮಾಡಿಸಿಕೊಂಡವರ ಕುಟುಂಬಕ್ಕು ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಸಹಃ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.